# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 320
ಸದಸ್ಯರ ಹೆಸರು : ಶ್ರೀ ನಸೀರ್ ಅಹ್ಮದ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 14.09.2022.
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮಾಂತರ ಪ್ರದೇಶಗಳಲ್ಲಿ ಗೋಮಾಳ ಜಮೀನನ್ನು ರೈತರಿಗೆ ಮಂಜೂರು ಮಾಡಲು ಇರುವ ನೀತಿ ನಿಯಮಾವಳಿ ಮತ್ತು ಷರತ್ತುಗಳೇನು; | ಸರ್ಕಾರಿ ಜಮೀನುಗಳಲ್ಲಿ ಹಲವಾರು ವರ್ಷಗಳಿಂದ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂ ರಹಿತ ಕೂಲಿ ಕಾರ್ಮಿಕರು, ಸಣ್ಣ ರೈತರು ಮತ್ತು ಪರಿಶಿಷ್ಟ ಜಾತಿ/ಪಂಗಡದವರಿಗೆ ಜಮೀನು ಮಂಜೂರು ಮಾಡಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ಕ್ಕೆ ತಿದ್ದುಪಡಿ ತರುವ ಮೂಲಕ 94(ಎ)(ಬಿ) ಮತ್ತು 94(ಎ)(4)ನ್ನು ಜಾರಿಗೆ ತಂದು ಕ್ರಮವಾಗಿ ನಮೂನೆ-50, 53 ಮತ್ತು 57ರಲ್ಲಿ ಅರ್ಜಿಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಿ, ಅನಧಿಕೃತವಾಗಿ ಸಾಗುವಳಿ ಮಾಡುವುದನ್ನು ಸಕ್ರಮಗೊಳಿಸಲು ಕ್ರಮ ವಹಿಸಲಾಗುತ್ತಿದೆ;-<br>• ಅವನು ಹದಿನೆಂಟು ವರ್ಷ ಗಳ ವಯಸ್ಸಿನವನಾಗಿರಬೇಕು;<br>• ಅವನು ಭೂಮಿಯು ಇರುವ ಅಥವಾ ಪಕ್ಕದಲ್ಲಿರುವ ತಾಲ್ಲೂಕಿನಲ್ಲಿ ತಾಲ್ಲೂಕಿನ ಪರಿಮಿತಿಯೊಳಗೆ ಖಾಯಂ ನಿವಾಸಿಯಾಗಿರಬೇಕು;<br>• ಅವನು ಖುದ್ದಾಗಿ ಸಾಗುವಳಿ ಮಾಡುವ ಸದ್ಭಾವಿಕ ಕೃಷಿಕ ಮತ್ತು ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಉಪಬಂಧಗಳ ಮೇರೆಗೆ ಭೂಮಿಯನ್ನು ಹೊಂದುವುದು ಮತ್ತು ಪಡೆಯುವುದರಿಂದ ನಿಷಿದ್ಧನಾಗತಕ್ಕದ್ದಲ್ಲ;<br>• ಅವನು ಹದಿನಾಲ್ಕನೇ ಏಪ್ರಿಲ್ 1990 ದಿನಕ್ಕೆ ಕಡೆಯಪಕ್ಷ ಹಿಂದಿನ ಮೂರು ವರ್ಷಗಳು ಕಡಿಮೆಯಲ್ಲದ ಅವಧಿಯ ನಿರಂತರ ಭೂಮಿಯ ಅನಧಿಕೃತ ಅಧಿಭೋಗನಾಗಿರಬೇಕು;(ನಮೂನೆ-50, 53ರಲ್ಲಿ ಅರ್ಜಿಸಲ್ಲಿಸಲು)<br>• 2005ರ ಜನವರಿ ಮೊದಲ ದಿನಕ್ಕೆ ಮೂರು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಯವರೆಗೆ ನಿರಂತರ ಅರ್ಜಿ ಸಲ್ಲಿಸಿದ ಅರ್ಜಿದಾರರು ಅನಧಿಕೃತವಾಗಿ ಆಕ್ರಮಿಸಿಕೊಂಡ ಭೂಮಿ ಯಾಗಿರಬೇಕು.(ನಮೂನೆ-57ರಲ್ಲಿ ಅರ್ಜಿಸಲ್ಲಿಸಲು)<br>• ಪರಂತು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭಗಳಲ್ಲಿ ಅಂತಹ ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇರತಕ್ಕದ್ದಲ್ಲ.<br>• ನಮೂನೆ-50 ಮತ್ತು 53 ರಡಿಯಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿದ ವ್ಯಕ್ತಿಯು ನಮೂನೆ-57 ರಲ್ಲಿ ಅರ್ಜಿ ಸಲ್ಲಿಸಲು ಅರ್ಹನಾಗಿರುವುದಿಲ್ಲ.<br>• ಸಕ್ರಮೀಕರಣ ಕೋರಿರುವ ಅರ್ಜಿದಾರನು ಈಗಾಗಲೇ ಹೊಂದಿರುವ ಜಮೀನು ಸೇರಿ ಕುಟುಂಬ ಹೊಂದಿರುವ ಜಮೀನು ಸೇರಿ ಗರಿಷ್ಟ 4-38 ಎಕರೆ/ಗುಂಟೆ ಜಮೀನನ್ನು ಸಕ್ರಮೀಕರಣಗೊಳಿಸಲು ಅವಕಾಶವಿರುತ್ತದೆ.<br>ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 94(ಎ) ರ ಕೋಷ್ಟಕದಲ್ಲಿ ಇರುವ ನಿರ್ಬಂಧಿತ ಅಂತರದಲ್ಲಿ ಬರುವ ಜಮೀನುಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ. |
| ಆ) | ಜಮೀನು ಹೊಂದಿರುವವರು ಅಥವಾ ಇಲ್ಲದಿರುವವರು ಎಷ್ಟು ವರ್ಷಗಳಿಂದ ಗೋಮಾಳ ಜಮೀನನ್ನು ಉಳುಮೆ ಮಾಡುತ್ತಿದ್ದರೆ ಮಂಜೂರು ಮಾಡಬಹುದು ಎಷ್ಟು ಜಮೀನಿನ ವಿಸ್ತೀರ್ಣದ ಒಡೆತನ ಹೊಂದಿದ್ದು, ಆ ಜಮೀನಿಗೆ ಹೊಂದಿಕೊಂಡ ಗೋಮಾಳವನ್ನು ಉಳುಮೆ ಮಾಡುತ್ತಿದ್ದರೆ ಮಂಜೂರು ಮಾಡಬಹುದೇ; (ಈ ಸಂಬಂಧಪಟ್ಟ ಕಾಯ್ದೆಯ ಆದೇಶಗಳ ಪ್ರತಿಗಳನ್ನು ನೀಡುವುದು) | |

| | | |
|---|---|---|
| ಇ) | ಗೋಮಾಳ ಜಮೀನಿನ ಒಡೆತನ ಹೊಂದಿ ಎಷ್ಟು ವರ್ಷಗಳ ನಂತರ ಪರಭಾರೆ ಮಾಡಬಹುದು; ಇದಕ್ಕೆ ಸರ್ಕಾರ ವಿಧಿಸಿರುವ ಷರತ್ತುಗಳೇನು; (ಆದೇಶಗಳ ಪ್ರತಿ ಒದಗಿಸುವುದು) | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ, 94-ಬಿ ಮತ್ತು 94-ಎ(4)ರಡಿಯಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಮಂಜೂರಾತಿ ಪಡೆದವನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 9(1)(i)ರನ್ವಯ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಸಂದರ್ಭಾನುಸಾರ 15 ವರ್ಷ ಅಥವಾ 25 ವರ್ಷದ ವರೆಗೆ ಅದನ್ನು ಪರಭಾರೆ ಮಾಡತಕ್ಕದ್ದಲ್ಲ. ಪರಂತು ಅವನು 5 ವರ್ಷಗಳ ನಂತರ ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಪಡೆದು, ಮಾರುಕಟ್ಟೆ ಮೌಲ್ಯದ ಶೇಕಡ 50 ರಷ್ಟು ಪಾವತಿಸಿ, ಮಾರಾಟ ಮಾಡಬಹುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಸರ್ಕಾರದ ಪುರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. |
| ಈ) | ಗೋಮಾಳ ಒಡೆತನ ಹೊಂದಿದ ನಂತರ ಪಹಣಿ - ಆರ್‌ಟಿಸಿಯಲ್ಲಿ ಮಾಲೀಕರ ಹೆಸರು ದಾಖಲಾದ ನಂತರ ಅಂತಹ ದವರಿಗೆ ಪೋಡಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣವನ್ನು ತಿಳಿಸುವುದು; | ಹೌದು. |
| ಉ) | ಗೋಮಾಳ ಒಡೆತನ ಹೊಂದಿದವರ ಜಮೀನನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡಾಗ ಸಂಬಂಧಪಟ್ಟ ಮಾಲೀಕರಿಗೆ ನೀಡುವ ಪರಿಹಾರಕ್ಕೂ ಇತರ ಜಮೀನುಗಳ ಮಾಲೀಕರಿಗೆ ನೀಡುವ ಪರಿಹಾರಕ್ಕೂ ವ್ಯತ್ಯಾಸವಿದೆಯೇ; ಹಾಗಿದ್ದಲ್ಲಿ, ಕಾರಣವೇನು; (ಆದೇಶದ ಪ್ರತಿ ಒದಗಿಸುವುದು) | ಗೋಮಾಳ ಜಮೀನು ಮೂಲತಃ ಸರ್ಕಾರಿ ಜಮೀನಾಗಿರುತ್ತದೆ. ಸಾರ್ವಜನಿಕ ಉದ್ದೇಶದ ಸರ್ಕಾರದ ಯೋಜನೆಗಳಿಗೆ ಸರ್ಕಾರಿ ಜಮೀನನ್ನು ಸ್ವಾಧೀನಪಡಿಸಿಕೊಂಡಲ್ಲಿ ಈ ಜಮೀನಿಗೆ ಪರಿಹಾರವನ್ನು ನಿಗದಿಪಡಿಸಿರುವುದಿಲ್ಲ. ಒಂದುವೇಳೆ ಗೋಮಾಳ ಜಮೀನು ಖಾಸಗಿ ವ್ಯಕ್ತಿಗಳಿಗೆ ನಿಯಮಾನುಸಾರ ಮಂಜೂರಾಗಿದ್ದಲ್ಲಿ, ಭೂ ಸ್ವಾಧೀನ ಕಾಯ್ದೆಯನ್ವಯ ಪರಿಶೀಲಿಸಿ, ಸಕ್ಷಮ ಪ್ರಾಧಿಕಾರದಿಂದ ದರ ನಿಗದಿಪಡಿಸಲಾಗುತ್ತದೆ. |
| ಊ) | ಗೋಮಾಳ ಮಂಜೂರಾತಿಗೆ ನಿಗದಿಪಡಿಸಿದ ನಿಯಮಗಳನ್ನು ಮೀರಿ ಮಂಜೂರಾಗಿರುವ ಗೋಮಾಳ ಜಮೀನನ್ನು ರದ್ದುಪಡಿಸಬಹುದೇ; ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಆದೇಶ ಹೊರಡಿಸಲಾಗಿದೆಯೇ; (ಆದೇಶದ ಪ್ರತಿ ನೀಡುವುದು) | ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108(ಕೆ)ರಡಿ ಮಂಜೂರಾದ ಜಮೀನನ್ನು ರದ್ದುಪಡಿಸಿ, ಮರುಸ್ವಾಧೀನ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. |
| ಋ) | ರಸ್ತೆಗೆ ಹೊಂದಿಕೊಂಡಂತಿರುವ ಗೋಮಾಳ ಜಮೀನಿನ ಮಂಜೂರಾತಿಯಾಗಿ, ಇಲ್ಲಿಯವರೆಗೂ ಪೋಡಿಯಾಗದೆ ಅಂತಹ ಜಮೀನನ್ನು ಉಳುಮೆ ಮಾಡುವವರು ಅಕ್ಕಪಕ್ಕದ ರೈತರ ಜಮೀನುಗಳಿಗೆ ಓಡಾಡಲು ರಸ್ತೆ ಬಿಡದಂತೆ ಗೋಮಾಳದ ಜಮೀನಿಗೆ ತಡೆಗೋಡೆ, ಬೇಲಿ ಹಾಕಿಕೊಂಡಾಗ, ಗೋಮಾಳ ಜಮೀನಿನ ಪಕ್ಕದಲ್ಲಿ ಸ್ವಂತ ಜಮೀನನ್ನು ಹೊಂದಿರುವ ರೈತರುಗಳ ಜಮೀನುಗಳಿಗೆ ಓಡಾಡಲು ದಾರಿ ಬಿಡಿಸಿಕೊಳ್ಳಲು ಅನುಸರಿಸಬಹುದಾದ ಕ್ರಮಗಳೇನು; ಯಾವ ಪ್ರಾಧಿಕಾರಕ್ಕೆ ದೂರು ಸಲ್ಲಿಸಬಹುದಾಗಿರುತ್ತದೆ? (ಸರ್ಕಾರಿ ಆದೇಶಗಳಿದ್ದಲ್ಲಿ ಒದಗಿಸುವುದು) | ಗೋಮಾಳ ಅಥವಾ ಸರ್ಕಾರಿ ಜಮೀನಿನಲ್ಲಿ ರೈತರಿಗೆ ಓಡಾಡಲು ರಸ್ತೆ ಅವಶ್ಯವಿದ್ದಲ್ಲಿ ಸರ್ಕಾರಿ ಜಮೀನಿನಲ್ಲಿ ಭೂ ಕಂದಾಯ ಕಾಯ್ದೆ, 1964ರ ಕಲಂ 71ರಡಿ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಲು ಅವಕಾಶವಿರುತ್ತದೆ. ಈ ಬಗ್ಗೆ ಸಂಬಂಧಿಸಿದ ಜಿಲ್ಲಾಧಿಕಾರಿಯವರಲ್ಲಿ ಮನವಿ ಸಲ್ಲಿಸಬಹುದಾಗಿರುತ್ತದೆ. |

ಸಂಖ್ಯೆ: ಆರ್‌ಡಿ 176 ಎಲ್‌ಜಿಕ್ಯೂ 2022

**(ಆರ್.ಅಶೋಕ)**
ಕಂದಾಯ ಸಚಿವರು